# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 396 (454) |
| ಉತ್ತರಿಸಬೇಕಾದ ದಿನಾಂಕ | : | 19.07.2024 |
| ಉತ್ತರಿಸುವ ಸಚಿವರು | : | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಚೇರಿಯಲ್ಲಿ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹಣ ದುರು ಪಯೋಗವಾಗಿರುವ ಪ್ರಕರಣ ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | • ಪ್ರಕರಣವು ವಿಚಾರಣಾ ಹಂತದಲ್ಲಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019 ಬೆಂಗಳೂರು ದಿನಾಂಕ: 29.01.2022 ರಲ್ಲಿ ಪ್ರಕರಣದ ವಿಚಾರಣೆ ನಡೆಸಲು ಶ್ರೀ ಜಿ.ಎಸ್.ಸೋಮಶೇಖರ್ ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ಇವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸಲಾಗಿರುತ್ತದೆ.<br>• ಪ್ರಸ್ತುತ ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್ ಇವರು ಬೇರೆಡೆಗೆ ವರ್ಗಾವಣೆಗೊಂಡ ಹಿನ್ನಲೆಯಲ್ಲಿ ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ಕಛೇರಿಗೆ ಸ್ಥಳ ನಿಯುಕ್ತಿಗೊಳಿಸಲಾಗಿರುವ ಶ್ರೀ ಕೆ.ಆರ್.ಕೃಷ್ಣ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ:03.06.2024 ರಲ್ಲಿ ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. |

| | | |
|---|---|---|
| ಆ) | ಇಲಾಖಾ ವಿಚಾರಣೆ ಕೈಗೊಂಡು, ವಿಚಾರಣಾ ವರದಿಯನ್ನು ಎಷ್ಟು ತಿಂಗಳೊಳಗೆ ಸಲ್ಲಿಸಬೇಕಿರುತ್ತದೆ. ಸದರಿ ಪ್ರಕರಣಗಳಲ್ಲಿ ಇಲಾಖಾ ವಿಚಾರಣೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; ಇಲಾಖಾ ವಿಚಾರಣೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು) | • ಸಿಆಸು ಇಲಾಖೆಯು ಇಲಾಖಾ ವಿಚಾರಣೆಗೆ ಸಂಬಂಧಪಟ್ಟಂತೆ ದಿನಾಂಕ: 04.10.2021 ರಂದು ಸುತ್ತೋಲೆ ಹೊರಡಿಸಿದ್ದು, ಸದರಿ ಸುತ್ತೋಲೆಯ ಅನುಸಾರ ವಿಚಾರಣಾಧಿಕಾರಿಗಳನ್ನು ನೇಮಿಸಿದ ನಂತರ ವಿಚಾರಣೆ ನಡೆಸಲು ಹಾಗೂ ವಿಚಾರಣಾ ವರದಿಯನ್ನು ಮಂಡಿಸಲು 4 ತಿಂಗಳು ಕಾಲಾವಕಾಶ ನಿಗಧಿಪಡಿಸಲಾಗಿರುತ್ತದೆ.<br><br>• ಪ್ರಸಕ್ತ ಪ್ರಕರಣದಲ್ಲಿ ಸಾಕ್ಷಿಗಳು ಪದೇ ಪದೇ ಗೈರು ಹಾಜರಾಗುತ್ತಿರುವುದರಿಂದ ಇಲಾಖಾ ವಿಚಾರಣೆ ವಿಳಂಬವಾಗುತ್ತಿದ್ದು, ಈ ವಿಳಂಬವನ್ನು ತಪ್ಪಿಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ: 01.07.2023 ರಂದು ಪ್ರಕರಣದಲ್ಲಿನ ಆರೋಪಗಳ ಕುರಿತು ಸಾಕ್ಷಿಗಳಿಂದ ಹೇಳಿಕೆ ಹಾಗೂ ದಾಖಲೆಗಳನ್ನು ಪಡೆಯುವ ಉದ್ದೇಶಕ್ಕಾಗಿ ಮತ್ತು ಹಾಜರಾತಿಪಡಿಸಲು Karnataka Departmental Enquiries (Enforcement of Attendance of witnesses, Production of Documents and Miscellanious Provision) Act 1981 ರ ಸೆಕ್ಷನ್ 5 ರಡಿಯಲ್ಲಿ ನಿಗಧಿಪಡಿಸಿರುವ ಅಧಿಕಾರಗಳನ್ನು ಚಲಾಯಿಸಲು ಸದರಿ ಕಾಯ್ದೆಯ ಸೆಕ್ಷನ್ 4 ರ ಅನುಸಾರ ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳಾದ ಶ್ರೀ ಜಿ.ಎಸ್ . ಸೋಮಶೇಖರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರಿಗೆ ಅಧಿಕಾರ ನೀಡಿ ಆದೇಶಿಸಲಾಗಿರುತ್ತದೆ.<br>• ಪ್ರಸ್ತುತ ದಿನಾಂಕ: 03.06.2024 ರ ಆದೇಶದಲ್ಲಿ ಪ್ರಕರಣದಲ್ಲಿನ ಮಂಡನಾಧಿಕಾರಿಗಳನ್ನು ಬದಲಾಯಿಸಿ ಹೊಸದಾಗಿ ನೇಮಿಸಲಾಗಿದ್ದು, ತ್ವರಿತವಾಗಿ ಇಲಾಖಾ ವಿಚಾರಣೆಯನ್ನು ಕೈಗೊಂಡು 3 ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಲು ವಿಚಾರಣಾಧಿಕಾರಿಗಳಿಗೆ ಸಹಕಾರ ನೀಡಿ ಕ್ರಮವಹಿಸುವಂತೆ ಮಂಡನಾಧಿಕಾರಿಯವರಿಗೆ ಸೂಚಿಸಲಾಗಿರುತ್ತದೆ. |
| ಇ) | ಇಲಾಖಾ ವಿಚಾರಣೆಯನ್ನು ಯಾವ ಯಾವ ದಿನಾಂಕಗಳಂದು ನಡೆಸಲಾಗಿರುತ್ತದೆ. | • ಇಲಾಖಾ ವಿಚಾರಣೆಯನ್ನು ಈ ಕೆಳಕಂಡ ದಿನಾಂಕಗಳಂದು ನಡೆಸಲಾಗಿರುತ್ತದೆ.<br>ದಿನಾಂಕ: 29.04.2022, 21.05.2022, 27.06.2022, |

<table>
<tr>
<td></td>
<td>ಹಾಗೂ ವಿಚಾರಣೆಗೆ ಕರೆದು ಮುಂದೂಡಿದ ದಿನಾಂಕಗಳು ಯಾವುವು; ಇದಕ್ಕೆ ಕಾರಣಗಳೇನು; (ದಿನಾಂಕ, ಹಾಜರಾದವರು ಮತ್ತು ಗೈರು ಹಾಜರಾದವರು ಸಂಪೂರ್ಣ ವಿವರ ನೀಡುವುದು).</td>
<td>11.07.2022, 2.08.2022, 03.09.2022, 14.10.2022, 4.11.2022, 18.03.2023, 01.04.2023, 0.05.2023, 18.07.2023, 18.01.2024, 9.01.2024, 01.02.2024<br>• ಪ್ರಕರಣದಲ್ಲಿ ಮುಖ್ಯ ಸಾಕ್ಷ್ಯಗಳಾದ ಶ್ರೀ ಪಿ.ರವಿಕುಮಾರ್, ಶ್ರೀಮತಿ ಕವಿತಾ ಡಿ.ಬಿ. ಶ್ರೀ ಪ್ರವೀಣ್ ಕುಮಾರ್, ಕು.ಅನಿತಾ, ಕು.ಕೋಮಲ, ಶ್ರೀ ಡಿ.ರಾಮೇಗೌಡ, ಶ್ರೀಮತಿ ಭಾಗ್ಯಲಕ್ಷ್ಮಿ ಎಂ.ಎಲ್ ರವರು ವಿಚಾರಣೆಗೆ ಗೈರುಹಾಜರಾಗುತ್ತಿರುವುದಾಗಿ ಮಂಡನಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.</td>
</tr>
<tr>
<td>ಈ)</td>
<td>ಸದರಿ ಪ್ರಕರಣದಲ್ಲಿ ಆರೋಪಿತ ಅಧಿಕಾರಿ/ ನೌಕರರ ಪೈಕಿ ಎಷ್ಟು ಮಂದಿ ಮೃತ ಪಟ್ಟಿದ್ದಾರೆ; ಮೃತಪಟ್ಟ ಪ್ರಕರಣಗಳಲ್ಲಿ ಯಾವ ರೀತಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುತ್ತದೆ; (ಸಂಪೂರ್ಣ ವಿವರ ನೀಡುವುದು).</td>
<td>ಪ್ರಕರಣದಲ್ಲಿ 02 ಮಂದಿ ಅಧಿಕಾರಿ/ ನೌಕರರು ಮೃತಪಟ್ಟಿರುತ್ತಾರೆ.<br>1. ವಿ.ಪಿ. ಆನಂದಕುಮಾರ್, ಲೆಕ್ಕಾ ಅಧೀಕ್ಷಕರು<br>2. ಹೆಚ್.ಎಲ್. ನಾಗರಾಜು, ಗ್ರೂಪ್ 'ಡಿ; ನೌಕರರು,<br>ಕರ್ನಾಟಕ ನಾಗರಿಕ ಸೇವಾ ನಿಯಮಗಳ ಅನುಸಾರ ಇತ್ಯರ್ಥಪಡಿಸಲಾಗುತ್ತದೆ.</td>
</tr>
<tr>
<td>ಉ)</td>
<td>ದುರುಪಯೋಗವಾದ ಹಣವನ್ನು ಬ್ಯಾಂಕ್‌ಗಳಿಂದ ಹಿಂಪಡೆಯುವ ಸಂಬಂಧ ಗ್ರಾಹಕರ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಯಾವ ಯಾವ ಬ್ಯಾಂಕ್‌ಗಳ ವಿರುದ್ಧ ಎಷ್ಟು ಮೊತ್ತಕ್ಕೆ ದೂರು ದಾಖಲಿಸಲಾಗಿದೆ; (ಬ್ಯಾಂಕ್‌ವಾರು ವಿವರ ನೀಡುವುದು).</td>
<td>
<table>
<tr><th>ಕ್ರ ಸಂ</th><th>ಬ್ಯಾಂಕ್ ಹೆಸರು</th><th>ಖಾತೆ ಸಂಖ್ಯೆ</th><th>ಖಾತೆಯ ವಿವರ</th><th>ದುರುಪಯೋಗವಾಗಿರುವ ಬಾಬ್ತು</th></tr>
<tr><td>1.</td><td>ಕಾರ್ಪೋರೇಷನ್ ಬ್ಯಾಂಕ್, ಮಂಡ್ಯ</td><td>52010232887108</td><td>ಎಂ.ಎಲ್.ಎ / ಎಂ.ಎಲ್.ಸಿ.</td><td>1,39,19,043</td></tr>
<tr><td>2.</td><td>ಕೆನರಾ ಬ್ಯಾಂಕ್, ಮಂಡ್ಯ</td><td>5251101001197</td><td>ಎಂ.ಪಿ. ಅನುದಾನ (ಸಿ.ಎಸ್.ಪಿ)</td><td>51,142</td></tr>
<tr><td>3.</td><td>ಪಂಜಾಬ್</td><td>252700010208</td><td>3054</td><td>13,52,464</td></tr>
</table>
</td>
</tr>
</table>

| | | | | |
|---|---|---|---|---|
| | ನ್ಯಾಷನಲ್ ಬ್ಯಾಂಕ್, ಮಂಡ್ಯ | 0281 | ಅನುದಾನ | |
| 4. | ಐ.ಡಿ.ಬಿ.ಐ ಬ್ಯಾಂಕ್, ಮಂಡ್ಯ | 1489104000024000 | ಇತರೆ ಇಲಾಖೆಗಳ ಖಾತೆ | 6,04,640 |
| 5. | ಎಸ್.ಬಿ.ಐ. ಮುಖ್ಯ ಶಾಖೆ ಮಂಡ್ಯ | 64045185776 | ನೆಫ್ಟ್ ಖಾತೆ | 52,25,000 |
| 6. | ಎಸ್.ಬಿ.ಐ. ಎಡಿಬಿ ಮಂಡ್ಯ | 54014771932 | ವಿಶ್ವ ಬ್ಯಾಂಕ್ | 72,10,000 |
| 7. | ಹೆಚ್ .ಡಿ.ಎಫ್.ಸಿ. ಬ್ಯಾಂಕ್, ಮಂಡ್ಯ | 25671450000062 | ಶ್ರೀ ರೆಹಮಾನ್ ಖಾನ್, ಸದಸ್ಯರ ಅನುದಾನ | 29,913 |
| 8. | ಆಕ್ಸಿಸ್ ಬ್ಯಾಂಕ್ | 911010013779274 | ಕೆರೆ ಸಂಜೀವಿನಿ / ಬರ ಪರಿಹಾರ | 24,158 |
| 9. | ಜಿಲ್ಲಾ ಖಜಾನೆ, ಮಂಡ್ಯ | ಜಿಲ್ಲಾ ಖಜಾನೆ ಚೆಕ್ ಗಳು | ಕಾರ್ಮಿಕರ ಕಲ್ಯಾಣ ನಿಧಿ | 47,75,015 |
| 10. | ಜಿಲ್ಲಾ ಖಜಾನೆ, ಮಂಡ್ಯ | ಜಿಲ್ಲಾ ಖಜಾನೆ ಚೆಕ್ ಗಳು | ಕಾರ್ಮಿಕರ ಕಲ್ಯಾಣ ನಿಧಿ | 19,34,354 |
| | | | **ಒಟ್ಟು ಮೊತ್ತ** | **3,51,25,729** |

| | | |
|---|---|---|
| | | ದುರುಪಯೋಗವಾದ ಹಣವನ್ನು ಬ್ಯಾಂಕ್‌ಗಳಿಂದ ಹಿಂಪಡೆಯುವ ಸಂಬಂಧ ಗ್ರಾಹಕರ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಮೇಲ್ಕಂಡ ಬ್ಯಾಂಕ್‌ಗಳ ವಿರುದ್ಧ ದೂರು ದಾಖಲಿಸುವ ಸಂಬಂಧ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಮಂಡ್ಯ ಇವರು Balarama Law Firm, Advocate & Solocitors, GF NO.30 & 31, HHS Complex, Silk Exchange buildings, (Next to Halasuru Gate Police Station, Cubbonpet main road, Bangalore-560002 ಎಂಬ ಸಂಸ್ಥೆಯನ್ನು ನೇಮಿಸಿಕೊಂಡಿದ್ದು, ದೂರು ದಾಖಲಿಸಲು ಕ್ರಮವಹಿಸಲಾಗುತ್ತಿದೆ. |
| ಊ | ಸದರಿ ಪ್ರಕರಣ (ವ್ಯಾಜ್ಯ)ದ ಸಲುವಾಗಿ ವಕೀಲರನ್ನು ನೇಮಕ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ವಿವರ ಹಾಗೂ ಅವರಿಗೆ ಈವರೆವಿಗೂ ಪಾವತಿಸಿರುವ ಶುಲ್ಕದ ಮೊತ್ತ ಎಷ್ಟು? (ಸಂಪೂರ್ಣ ವಿವರ ನೀಡುವುದು). | ಪ್ರಕರಣದ ವ್ಯಾಜ್ಯದ ಸಲುವಾಗಿ, ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಮಂಡ್ಯ ಇವರು Balarama Law Firm, Advocate & Solocitors, GF NO.30 & 31, HHS Complex, Silk Exchange buildings, (Next to Halasuru Gate Police Station, Cubbonpet main road, Bangalore-560002 ಎಂಬ ಸಂಸ್ಥೆಯನ್ನು ನೇಮಿಸಿಕೊಂಡಿರುತ್ತಾರೆ. ಸದರಿಯವರಿಗೆ ಇದುವರೆವಿಗೂ ಯಾವುದೇ ಶುಲ್ಕ ಪಾವತಿಸಿರುವುದಿಲ್ಲ. |

**ಗ್ರಾಅಪ 73 ಜಡ್‌ಪಿಎ 2024**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು